ಮಹಾದಾಯಿ ನೀರು– ವಿಚಾರ ಸಂಕಿರಣದಲ್ಲಿ ಅಭಿಮತ

# ಯೋಜನೆಯ ಹೆಸರಲ್ಲಿ ರೈತರ ಬಲಿ

ಪ್ರಜಾವಾಣಿ ವಾರ್ತೆ

ಧಾರವಾಡ: 'ನಲವತ್ತು ವರ್ಷಗಳಿಂದ ವಿವಿಧ ರಾಜಕೀಯ ಪಕ್ಷಗಳು ರೈತರ ಹೊಲಗಳಿಗೆ ನೀರು ನೀಡುವುದಾಗಿ ಹೇಳುತ್ತಲೇ ಬಂದಿದ್ದು, ಈ ರಾಜಕೀಯ ವಿಷವರ್ತುಲದಿಂದ ಹೊರ ಬರಲು, ನೀರನ್ನು ವೈಜ್ಞಾನಿಕವಾಗಿ ಬಳಸುವುದೊಂದೇ ರೈತರಿಗಿರುವ ಮಾರ್ಗ' ಎಂಬ ಅಭಿಪ್ರಾಯ ಬುಧವಾರ ಇಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ವ್ಯಕ್ತವಾಯಿತು.

ಅಬ್ದುಲ್ ನಜೀರ್ ಸಾಬ್ ಪಂಚಾಯತ್ ರಾಜ್ ಪೀಠದ ಅಡಿಯಲ್ಲಿ ನಡೆದ 'ಅಂತರರಾಜ್ಯ ನೀರು ಹಂಚಿಕೆ: ಮಹಾದಾಯಿ ನದಿ ಪಾತ್ರ' ವಿಷಯವಾಗಿ ನಡೆದ ಚರ್ಚೆಯಲ್ಲಿ ನೀರಾವರಿ ತಜ್ಞರು, ಯೋಜನಾ ಆಯೋಗದ ಮಾಜಿ ಸದಸ್ಯರು, ವಕೀಲರು, ಕಾನೂನು ವಿ.ವಿ ಕುಲಪತಿ, ರೈತರ ಪ್ರತಿನಿಧಿಗಳು, ಪತ್ರಕರ್ತರು ಹೀಗೆ ವಿವಿಧ ಕ್ಷೇತ್ರದಲ್ಲಿದ್ದು ಮಹಾದಾಯಿ ಹೋರಾಟದಲ್ಲಿ ತೊಡಗಿಸಿಕೊಂಡವರು ಪಾಲ್ಗೊಂಡಿದ್ದರು.

'ಯೋಜನೆಯ ಹೆಸರಿನಲ್ಲಿ ನಡೆದಿರುವ ರಾಜಕೀಯ ಸ್ಪರ್ಧೆಗೆ ರೈತರು ಬಲಿಯಾಗುತ್ತಿದ್ದಾರೆ. ನಮ್ಮಲ್ಲಿ ನೀರಿಗಾಗಿ ಪ್ರತ್ಯೇಕ ಮಂಡಳಿಯಾಗಲೀ ಅಥವಾ ಜಲನೀತಿಯಾಗಲೀ ಇಲ್ಲದಿರುವುದೇ ಇಂತಹ ಯೋಜನೆಗಳು ಹಾಳಾಗಲು ಕಾರಣ' ಎಂದು ರೈತ ಹೋರಾಟಗಾರ ಹೇಮಂತ ಪಾಂಚಾಲ ಆರೋಪಿಸಿದರು.

**ಮುಖ್ಯಾಂಶಗಳು**

- ಸಮಗ್ರ ಜಲನೀತಿ ಅಗತ್ಯ ಪ್ರತಿಪಾದನೆ
- ಹಳ್ಳಗಳ ಸಮಗ್ರ ನಿರ್ವಹಣೆಗೆ ಪಣ
- ಕರ್ನಾಟಕವೇ ಹಾಕಿಕೊಂಡ ಕಗ್ಗಂಟು

'ನೀರು ಕೊಡಲು ಗೋವಾ ಒಪ್ಪಿದರೂ ಅದು ಇಲ್ಲಿಗೆ ಬರಲು ಇನ್ನೂ ಹತ್ತಾರು ವರ್ಷ ಬೇಕು. ಜೊತೆಗೆ ಈ ಮುನ್ನ ಅಂದುಕೊಂಡಷ್ಟು ಭೂಮಿಗೆ ನೀರುಣಿಸಲು ಸಾಧ್ಯವಿಲ್ಲ ಎಂಬುದು ಈಗ ಅರ್ಥವಾಗುತ್ತಿದೆ. ಹೀಗಾಗಿ ನಮ್ಮಲ್ಲಿರುವ 20 ರಿಂದ 30 ವಿವಿಧ ಹಳ್ಳಗಳ ಸಮಗ್ರ ನಿರ್ವಹಣೆಗೆ ಪಣ ತೊಡಬೇಕು; ಮಲಪ್ರಭಾ ನದಿಯೂ ಸೇರಿದಂತೆ ಇತರ ನೀರಿನ ಸದ್ಬಳಕೆಗೆ ಮುಂದಾಗಬೇಕು. ಭಾರತದಲ್ಲಿ ಮೂರನೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಹುಟ್ಟುವ ಮಹಾದಾಯಿ ನದಿಯ ನೀರು ಹಾಗೂ ಅದರ ಉಪನದಿಗಳ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಯೋಜನೆ ನಮ್ಮಲ್ಲಿ ಇಲ್ಲ ಎಂದರೆ ಇದಕ್ಕಿಂತ ಶೋಚನೀಯ ಸ್ಥಿತಿ ಮತ್ತೊಂದು ಇರಲಾರದು' ಎಂದು ಅವರು ಬೇಸರ ವ್ಯಕ್ತಪಡಿಸಿದರು.

**ರಾಜ್ಯವೇ ಸೃಷ್ಟಿಸಿಕೊಂಡ ಬಿಕ್ಕಟ್ಟು:** ಮಹಾದಾಯಿ ಯೋಜನೆಗೆ ಎದುರಾಗಿರುವ ಕಗ್ಗಂಟು ಗೋವಾ ಮತ್ತು ಮಹಾರಾಷ್ಟ್ರ ಸರ್ಕಾರ ಸೃಷ್ಟಿಸಿರುವುದಲ್ಲ; ಬದಲಿಗೆ ಕರ್ನಾಟಕವೇ ಸೃಷ್ಟಿಸಿಕೊಂಡಿದ್ದಾಗಿದೆ ಎಂಬುದರಲ್ಲಿ ಅನುಮಾನವಿಲ್ಲ ಎಂದು ಅಭಿಪ್ರಾಯಪಟ್ಟ ರೈತ ಸೇನೆಯ ಶಂಕರಪ್ಪ ಅಂಬಲಿ, 'ಕುಡಿಯುವ ನೀರಿಗೆ 0.216 ಟಿ.ಎಂ.ಸಿ. ನೀರು ಸಾಕು ಎಂದು ಇತ್ತೀಚಿನ ವರದಿ ಹೇಳಿದೆ. ಅದನ್ನು ಬಿಟ್ಟು ಸರ್ಕಾರ ಸುಳ್ಳು ಹೇಳಿ ಹೆಚ್ಚು ಟಿ.ಎಂ.ಸಿ. ನೀರು ತರುವ ಅಗತ್ಯವಾದರೂ ಏನಿದೆ. ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಗೆ ನೀರು ಕೇಳಿರುವ ಸರ್ಕಾರ ಕೃಷಿಗಾಗಿ ಏನನ್ನೂ ಕೇಳಿಲ್ಲವೇ? ಇವೆಲ್ಲವೂ ಇಷ್ಟು ವರ್ಷಗಳ ಕಾಲ ರೈತರನ್ನು ವಂಚಿಸುತ್ತಲೇ ಬಂದಿರುವುದಕ್ಕೆ ನಿದರ್ಶನ' ಎಂದ ಅವರು, ಮಹಾದಾಯಿಗೆ ಇರುವ 19 ಉಪನದಿಗಳಲ್ಲಿ ರಾಜ್ಯದಲ್ಲಿ ಹುಟ್ಟುವ ಹಳ್ಳಗಳನ್ನು ಸೇರಿಸಲು ನಮ್ಮ ಜನಪ್ರತಿನಿಧಿಗಳಿಗೆ ಸಾಧ್ಯವಾಗಿಲ್ಲ; ಕಳೆದ 9 ವರ್ಷಗಳಲ್ಲಿ ₹199ಕೋಟಿ ಖರ್ಚು ಮಾಡಿದರೂ ಹನಿ ನೀರು ಬರಲಿಲ್ಲವೆಂದರೆ ಮುಖಂಡರ ಇಚ್ಛಾಶಕ್ತಿ ಎಂತಹದ್ದು ಎಂಬುದರ ಅರಿವಾಗುತ್ತದೆ ಎಂದರು.

ಸಭೆಯಲ್ಲಿ ಪ್ರೊ. ಜಿ.ಕೆ.ಕಡೆಕೊಡಿ, ಡಾ.ಚಿದಾನಂದ ರೆಡ್ಡಿ ಪಾಟೀಲ, ಕಳಸಾ ಯೋಜನೆಯ ಎಂಜಿನಿಯರ್ ಎ.ಆರ್. ಕುಸುಗಲ್, ಸುಭಾಷ್ ಗುಮಾಸ್ತೆ, ಪ್ರೊ. ರಾಜೇಂದ್ರ ಪೊದ್ದಾರ್, ಬಸವರಾಜ ಹೊಂಗಲ್, ಪ್ರೊ. ವಿ.ಬಿ.ಅಣ್ಣಿಗೇರಿ ಮುಂತಾದವರು ಪಾಲ್ಗೊಂಡಿದ್ದರು.

## ವಾಣಿಜ್ಯ ಬೆಳೆ ಮೇಲಿನ ಅವಲಂಬನೆಯೇ ಆತ್ಮಹತ್ಯೆಗೆ ಕಾರಣ

ಅರಣ್ಯ ನಾಶದಿಂದಾಗಿ ನದಿ ಪಾತ್ರದ ಪ್ರದೇಶಗಳಲ್ಲಿ ಮಳೆ ಪ್ರಮಾಣ ಏರುಪೇರಾಗಿದೆ. ವಾಣಿಜ್ಯ ಬೆಳೆಗಳ ಮೇಲಿನ ಅತಿಯಾದ ಅವಲಂಬನೆ ರೈತರನ್ನು ಆತ್ಮಹತ್ಯೆಗೆ ನೂಕುತ್ತಿದೆ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ವಿಭಾಗದ ವಿಜ್ಞಾನ ಡಾ. ಟಿ.ವಿ.ರಾಮಚಂದ್ರ ಹೇಳಿದರು.

ಕಡಿಮೆ ನೀರಿನ ಪೂರೈಕೆ ಇರುವ ಉತ್ತರ ಕರ್ನಾಟಕದಲ್ಲಿ 250ಕ್ಕೂ ಹೆಚ್ಚು ವಿಧದ ಬೆಳೆ ಬೆಳೆಯಲಾಗುತ್ತಿದೆ ಎಂದು ಮಾಹಿತಿ ನೀಡಿದ ಅವರು, ನೀರಿನ ಪೂರೈಕೆ ಹೆಚ್ಚಾದಲ್ಲಿ ಮಣ್ಣಿನ ಫಲವತ್ತತೆ ನಾಶವಾಗಲಿದ್ದು, ನೀರಿನ ಸದ್ಬಳಕೆ ಕುರಿತು ರೈತರಿಗೆ ಮನವರಿಕೆ ಮಾಡಬೇಕಾದ ಅಗತ್ಯವಿದೆ ಎಂದರು.